# ಅಧ್ಯಾಯ – ೨ chapter-2

# ಸಂಶೋಧನ ಅಧ್ಯಯನದ ವಿಧಾನ ಮತ್ತು ಸಮಸ್ಯೆಗಳು

## ಅಧ್ಯಾಯ : ಎರಡು

## ಸಂಶೋಧನಾ ಅಧ್ಯಯನದ ವಿಧಾನ ಮತ್ತು ಸಮಸ್ಯೆಗಳು

ಮಹಿಳಾಪರಾಧವೆಂಬುದು ಜಗತ್ತಿನಾದ್ಯಂತ ಬೆಳೆಯುತ್ತಿರುವ ಸಾಮಾಜಿಕ ಸಮಸ್ಯೆಯಾಗಿದೆ. ಆದರೆ ನಮ್ಮ ಭಾರತದಲ್ಲಿ ಅದರಲ್ಲೂ ನಮ್ಮ ರಾಜ್ಯ ಕರ್ನಾಟಕದಲ್ಲಿ ತೀವ್ರ ಗತಿಯಲ್ಲಿ ಬೆಳಯುತ್ತಿರುವ ಮಹಿಳಾಪರಾಧದತ್ತ ಗಮನ ಹರಿಸುವ ಕೆಲಸಗಳು ನಡೆಯುತ್ತಿಲ್ಲ. ಆದುದರಿಂದ ಮಹಿಳಾಪರಾಧವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದರಿಂದ ಮಹಿಳಾಪರಾಧದ ಸ್ವರೂಪ ಮತ್ತು ನಿರ್ದಿಷ್ಟ ಕಾರಣಗಳನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇಂದಿನ ದಿನಗಳಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಹಿಳಾಪರಾಧದ ಬಗ್ಗೆ ಆಳವಾದ ಸಂಶೋಧನೆಗಳು ನಡೆಯಬೇಕಿವೆ. ಇದರಿಂದ ಮಹಿಳಾಪರಾಧದ ಬಗೆಗಿನ ಮುಂದಿನ ಸಂಶೋಧನೆಗಳಿಗೆ ದಾರಿಮಾಡಿಕೊಟ್ಟಂತಾಗುತ್ತದೆ. ಜೊತೆಗೆ ಸಂಶೋಧಕರು ಗಮನ ಹರಿಸುವಲ್ಲಿ ಆಸಕ್ತಿದಾಯಕ ವಿಷಯವಾಗುತ್ತದೆ. ಆದರೆ ರಾಜ್ಯವೆಂದರೆ ಇದು ದೇಶದ ಒಂದು ಪ್ರದೇಶಕ್ಕೆ ಸೀಮಿತವಾಗುತ್ತದಾದರೂ, ಅಧ್ಯಯನಕ್ಕೆ ದೇಶವನ್ನು ಆಯ್ಕೆಮಾಡಿಕೊಳ್ಳುವುದು ದೊಡ್ಡ ಸಮಸ್ಯೆಯಾಗಿದೆ. ಯಾಕೆಂದರೆ ಭಾರತದಾದ್ಯಂತ ತಿರುಗಾಡಿ ಮಹಿಳಾಪರಾಧದ ಬಗ್ಗೆ ಸಂಶೋಧನ ಕೈಗೊಳ್ಳಲು ಆಗುವುದಿಲ್ಲ. ಕಾರಣವೆಂದರೆ ಬೇರೆ ಬೇರೆ ರಾಜ್ಯಗಳ ಭಾಷೆಗಳು ಸಹ ಬೇರೆಬೇರೆಯಾಗಿರುತ್ತವೆ. ಹಣಕಾಸಿನ ಕೊರತೆ ಎದುರಾಗುತ್ತದೆ. ಜೊತೆಗೆ ಅಪರಿಚಿತ ಸ್ಥಳಗಳಿಗೆ ಹೋಗಬೇಕಾಗುವುದರಿಂದ ಭದ್ರತೆಯ ಸಮಸ್ಯೆ ಎದುರಾಗುತ್ತದೆ. ಇವುಗಳನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯದ ಆರು ಕೇಂದ್ರ ಕಾರಾಗೃಹಗಳಲ್ಲಿಂದ ಎರಡು ಕೇಂದ್ರ ಕಾರಾಗೃಹಗಳಾದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಬೆಂಗಳೂರು

ಹಾಗೂ ಹಿಂಡಲಗಾ ಕೇಂದ್ರ ಕಾರಾಗೃಹ ಬೆಳಗಾವಿ ಇವುಗಳೆರಡನ್ನು ಆಯ್ದುಕೊಳ್ಳಲಾಗಿದೆ. ಇವು ಕನ್ನಡ ಭಾಷೆಯನ್ನು ಹೊಂದಿದಂತ ಪ್ರದೇಶಗಳು. ಕರ್ನಾಟಕ ವಿಶ್ವವಿದ್ಯಾಲಯವಿರುವ ಧಾರವಾಡದಿಂದ ಸುಮಾರು ನಾಲ್ಕುನೂರಾ ಇಪ್ಪತ್ತು ಕಿ.ಮೀ. ಅಂತರದಲ್ಲಿರುವ ಬೆಂಗಳೂರು ಹಾಗೂ ಎಪ್ಪತ್ತಾರು ಕಿ.ಮೀ. ಅಂತರದಲ್ಲಿರುವ ಬೆಳಗಾವಿ ಇವುಗಳೆರಡನ್ನು ಅಧ್ಯಯನದ ಹಿತದೃಷ್ಟಿಯಿಂದ ಆಯ್ದುಕೊಳ್ಳಲಾಗಿದೆ.

**೨.೧ ದತ್ತಾಂಶಗಳ ಸಂಗ್ರಹಣೆ (Collection of Data) :**

ಸಂಶೋಧನ ಕಾರ್ಯದಲ್ಲಿ ತೊಡಗಿರುವ ಸಂಶೋಧಕನು ಅನುಸರಿಸುವ ವಿಧಾನ ಅತೀ ಮುಖ್ಯವಾದುದು. ಈ ಸಂಶೋಧನಾಧ್ಯಯನದಲ್ಲಿ ಕ್ಷೇತ್ರಾಧ್ಯಯನದಿಂದ ಅವಲೋಕನ, ರಚಿತ ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನದ ಮೂಲಕ ಮಾಹಿತಿಯನ್ನು ಕಲೆಹಾಕಿಕೊಂಡು, ಪ್ರಾಥಮಿಕ ಕೆಲ ಮಾಹಿತಿಗಳನ್ನು ಸಮಾಜಶಾಸ್ತ್ರಜ್ಞರು, ಅಪರಾಧಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಕಾನೂನು ತಜ್ಞರು, ಮನಃಶ್ಯಾಸ್ತ್ರಜ್ಞರು ಬರೆದ ಗ್ರಂಥಗಳು ಮತ್ತು ಕೇಂದ್ರ ಕಾರಾಗೃಹ ದಾಖಲಾತಿ ಪುಸ್ತಕಗಳ ಸಹಾಯ ಪಡೆದುಕೊಳ್ಳಲಾಗಿದೆ.

ರಚಿತ ಪ್ರಶ್ನಾವಳಿಯು ಕನ್ನಡ ಮತ್ತು ಇಂಗ್ಲೀಷ್ ಇವೆರಡು ಭಾಷೆಗಳಲ್ಲಿ ರಚಿಸಲಾಗಿತ್ತು. ಪ್ರಶ್ನೆಗಳು ಸಂವೃತ (Closed) ಮಾದರಿಯವಾಗಿದ್ದರೂ, ಕೊನೆಯ ಪುಟದ ಕೆಲ ಪ್ರಶ್ನೆಗಳು ವಿವೃತ (Open) ಮಾದರಿಯವಾಗಿವೆ.

ಇನ್ನು ಪ್ರಾರಂಭದಲ್ಲಿಯೇ ಉದ್ಭವಿಸುವ ಸಮಸ್ಯೆ ಎಂದರೆ ಕಾರಾಗೃಹಗಳಲ್ಲಿ ಹೋಗಬೇಕಾದರೆ ಕೆಲವೊಂದು ನಿಯಮಾವಳಿಗಳನ್ನು ಪಾಲಿಸಲೇಬೇಕಾಗುತ್ತದೆ. ಇಲ್ಲಿ ಸಂಶೋಧಕರಾದವರು ವಿಭಾಗದ ಮುಖ್ಯಸ್ಥರು ಮತ್ತು ಮಾರ್ಗದರ್ಶಕರ ಮುಖಾಂತರ ಪೊಲೀಸ್ ಮಹಾನಿರೀಕ್ಷಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರಿಗೆ ಮಹಿಳಾಪರಾಧಿಗಳನ್ನು ಸಂಶೋಧನೆಯ ಉದ್ದೇಶದ ಮೇರೆಗೆ ಭೆಟ್ಟಿಮಾಡುವ ಕುರಿತು ಅನುಕೂಲ ಮಾಡಿಕೊಡಬೇಕೆಂದು ಮನವಿಪತ್ರ ರವಾನಿಸಿ ಅವಕಾಶಕ್ಕಾಗಿ ಅಥವಾ ಅನುಮತಿಗಾಗಿ ಕಾದು ಕುಳಿತುಕೊಳ್ಳಬೇಕು. ಇದನ್ನೆಲ್ಲ ಏಕೆ ಉಲ್ಲೇಖಿಸಬೇಕಾದುದೆಂದರೆ, ಸಂಶೋಧಕನಾದವನಿಗೆ ಕೊಟ್ಟ ಕಾಲಾವಧಿ ಬಹಳ ಮುಖ್ಯವಾಗಿರುತ್ತದೆ. ಇದಾದ ನಂತರ ಅವಕಾಶ ಕಲ್ಪಿಸಿಕೊಟ್ಟುದರ ಬಗೆಗಿನ ಪತ್ರದೊಂದಿಗೆ ಸಂಶೋಧನೆಗೆ ಅಗತ್ಯ ಪರಿಕರಗಳೊಂದಿಗೆ ಬೆಂಗಳೂರು ಪರಪ್ಪನ

ಅಗ್ರಹಾರ ಕೇಂದ್ರ ಕಾರಾಗೃಹ ಮತ್ತು ಬೆಳಗಾವಿ ಹಿಂಡಲಗಾ ಕೇಂದ್ರ ಕಾರಾಗೃಹಗಳಲ್ಲಿರುವ ಅಪರಾಧಿ ಮಹಿಳೆಯರನ್ನು ಮೌಖಿಕ ಸಂದರ್ಶನಕ್ಕೊಳಪಡಿಸಿಕೊಳ್ಳಲಾಯಿತು. ಈ ಸಮಯದಲ್ಲಿ ಕೆಲವೊಂದಿಷ್ಟು ಅಡೆ-ತಡೆಗಳೂ ಎದುರಾದವು. ಮುಖ್ಯವಾಗಿ ಕೆಲವೊಂದಿಷ್ಟು ಮಹಿಳಾಪರಾಧಿಗಳು ಸಂಶೋಧಕನಲ್ಲಿಗೆ ಬರಲು ಹಿಂಜರಿಯತೊಡಗಿದರು. ತಮ್ಮ ವಯಕ್ತಿಕ ವಿಷಯದ ಬಗ್ಗೆ ಹೇಳಬೇಕಾಗಿರುವುದರಿಂದ ತಮಗೆ ಅಪಾಯ ಒದಗಬಹುದೆಂಬ ಕಾರಣವೂ ಅವರಲ್ಲಿದ್ದಿರಬಹುದು. ಕಾರಣವೆಂದರೆ ಸಂಶೋಧಕನಾದವನು ಮಾರುವೇಶದಲ್ಲಿರುವ ಪೊಲೀಸ್ ಅಧಿಕಾರಿ, ನ್ಯಾಯಾಧೀಶ ಅಥವಾ ಇನ್ನಾವುದೋ ತಮ್ಮ ಬಗ್ಗೆ ತಿಳಿಯಲು ಬಂದ ಗೂಢಚರ್ಯ ಅಧಿಕಾರಿಯೋ ಎಂಬಂತ ಅನುಮಾನಗಳೇಳುವುದು ಸಹಜ. ಅದರಲ್ಲೂ ಹೆಚ್ಚಿನ ಮಹಿಳಾಪರಾಧಿಗಳು ಮೇಲ್ಮನವಿ ಸಲ್ಲಿಸಿದವರಾಗಿರುವುದರಿಂದ ಭಯಪಡುವುದು ಸಹಜ. ಇನ್ನೂ ಹೆಚ್ಚಿನ ಶಿಕ್ಷೆ ಆಗುತ್ತದೇನೋ ಎಂಬ ಆತಂಕ ಅವರಲ್ಲಿರುತ್ತದೆ. ಎಲ್ಲಾ ಅಪರಾಧಿ ಮಹಿಳೆಯರು ತಮ್ಮ ಬಿಡುಗಡೆಗಾಗಿ ಹಂಬಲಿಸುತ್ತಿರುತ್ತಾರೆ. ಬಿಡುಗಡೆಯಾಗುವ ದಿನ ಬರುತ್ತದೆಂದು ದಿನಗಳನ್ನು ಎಣಿಕೆ ಮಾಡುತ್ತ ಕಾಲ ತಳ್ಳುತ್ತಿರುತ್ತಾರೆ. ಈ ಉದ್ದೇಶದಿಂದಲೂ ಸಹ ಸಂಶೋಧನಾಧ್ಯಯನದಲ್ಲಿ ದಾಖಲಿಸುವ ಕೆಲ ಆಯ್ದ ಪ್ರಮುಖ ಪ್ರಕರಣಗಳಲ್ಲಿ ವೈಯಕ್ತಿಕ ಹೆಸರುಗಳನ್ನು ದಾಖಲಿಸದೇ ಇರುವುದು.

ಸಂಶೋಧನಯ ಬಗ್ಗೆ ತಿಳುವಳಿಕೆ ಹೇಳಿ ಮನವೊಲಿಸಿಕೊಂಡು ಅದರಲ್ಲೂ ಕೆಲ ಅಪರಾಧಿ ಮಹಿಳೆಯರು ಕಲಿತವರಿರುವುದರಿಂದ ಸಂಶೋಧನೆಯ ಬಗ್ಗೆ ಕೇಳಿ ತಿಳಿದುಕೊಂಡವರಿರುವುದರಿಂದ ತಾವುಗಳೇ ಸ್ವಯಂಪ್ರೇರಿತರಾಗಿ ಮುಂದೆ ಬಂದವರಾಗಿದ್ದಾರೆ. ಈ ಹಿಂಜರಿಯುವ ಸಮಸ್ಯೆ ಕೇವಲ ಒಂದೆರಡು ದಿನಗಳು ಮಾತ್ರ. ಕಾರಣವೆಂದರೆ ಮೊದಲನೇ ದಿನ ಸಂಶೋಧಕನಾದವನು ಅಪರಿಚಿತನಾಗಿ ಕಂಡಿರುವುದರಿಂದ ಹಿಂಜರಿಯುತ್ತಾರೆ. ಅದುವೇ ಎರಡ್ಮೂರು ದಿನಗಳಲ್ಲಿ ಅತ್ಯಂತ ಆತ್ಮೀಯತೆಯಿಂದ, ಸಂಕೋಚಪಡದೆ ಮುಕ್ತ ಮನಸ್ಸಿನಿಂದ ಉತ್ತರ ಕೊಡತೊಡಗುತ್ತಾರೆ. ಕೆಲ ಮಹಿಳೆಯರಂತೂ ಯಾವುದೆ ಸಂಕೋಚವಿಲ್ಲದೆ ನಮ್ಮಿಂದ ತಪ್ಪು ನಡೆದುಹೋಗಿದೆ, ಅದಕ್ಕಾಗಿ ಶಿಕ್ಷೆ ಆಗಿದೆ. ಈಗ ಹೆದರುವ ಅವಶ್ಯಕತೆ ಬೀಳುವುದಿಲ್ಲ. ನಮ್ಮಿಂದ ಸಮಾಜಕ್ಕೆ ಅಂದರೆ ಹೊರಜಗತ್ತಿನ ಮಹಿಳೆಯರಿಗೊಂದು ನಮ್ಮಿಂದ ಸಂದೇಶ (ಸಂಶೋಧನಾಧ್ಯಯನದ ಮೂಲಕ) ರವಾನೆಯಾಗುತ್ತದೆಂದರೆ ಎಲ್ಲವನ್ನೂ ಹೇಳುತ್ತೇವೆಂದು ತಮ್ಮ ಬದುಕಿನ ಎಲ್ಲ ವಿಷಯಗಳನ್ನು ಹೇಳಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ವೀಕ್ಷಿಸುವ, ಸಂದರ್ಶಿಸುವ, ಅವರೊಂದಿಗೆ ಮುಕ್ತ ಸಂಭಾಷಣೆ

ಮೂಲಕ ವಿಷಯ ದಾಖಲಿಸಿಕೊಳ್ಳುವ ಕೆಲಸ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ಪ್ರಶ್ನಾವಳಿ ಮತ್ತು ಸಂದರ್ಶನಕ್ಕೆ ಹೆಚ್ಚಿನ ಮಹತ್ವ ಕೊಡುವುದರ ಜೊತೆಗೆ ಕೇಳಿದ, ನೋಡಿದ, ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದುದನ್ನೆಲ್ಲ ಗಮನಿಸಿ ದಾಖಲಿಸಿಕೊಂಡು ಅಗತ್ಯವಿದ್ದಲ್ಲಿ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ವಿಷಯ ನಿರೂಪಣೆಯಲ್ಲಿ ಅನುಕೂಲವಾಗಿರುತ್ತದೆ. ಒಟ್ಟಿನಲ್ಲಿ ಇಂತಹ ವಿಷಯದಲ್ಲಿ ಸಂಶೋಧನೆ ಮಾಡುವುದೆಂದರೆ ಸಂಶೋಧಕನಿಗೆ ಇದೊಂದು ವಿಶಿಷ್ಟ ಅನುಭವ.

ಕ್ಷೇತ್ರಕಾರ್ಯಕ್ಕಾಗಿ (Field Work) ಕೇಂದ್ರಕಾರಾಗೃಹಗಳಿಗೆ ಜನವರಿ ೨೦೦೮ ರಿಂದ ಫೆಬ್ರುವರಿ ೨೦೦೮ ರೊಳಗೆ ಭೆಟ್ಟಿ ಕೊಡಲಾಗಿದೆ.

ಮುಖ್ಯವಾಗಿ ಈ ಸಂದರ್ಭದಲ್ಲಿ ಇನ್ನೊಂದಂಶವನ್ನು ಸ್ಪಷ್ಟಪಡಿಸಲೇ ಬೇಕಾಗುತ್ತದೆ. ಸಮಾಜ ವೈಜ್ಞಾನಿಕ ಸಂಶೋಧನೆಗಳಲ್ಲಿ ಹೆಚ್ಚು ಮಾದರಿ ವಿಧಾನ (Sampling Method) ವನ್ನು ಬಳಸಲಾಗುತ್ತದೆ. ಆದರೆ ಈ ಸಂಶೋಧನೆಗೆ ಸಂಬಂಧಿಸಿದಂತೆ ಮಾದರಿ ವಿಧಾನ ಅನುಕರಿಸುವಂತಹ ಅವಶ್ಯಕತೆ ಬೀಳಲಿಲ್ಲ. ಏಕೆಂದರೆ ಮಹಿಳಾಪರಾಧಿಗಳ ಸಂಖ್ಯೆ ಬಹಳ ಕಡಿಮೆ ಪ್ರಮಾಣದಲ್ಲಿರುವುದರಿಂದ ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಮತ್ತು ಬೆಳಗಾವಿ ಹಿಂಡಲಗಾ ಕೇಂದ್ರ ಕಾರಾಗೃಹ ಇವುಗಳೆರಡರಲ್ಲಿರುವ ಪ್ರಮುಖ ಅಪರಾಧಗಳನ್ನೆಸಗಿದ ಎಲ್ಲಾ ಮಹಿಳಾಪರಾಧಿಗಳನ್ನು ಸಂದರ್ಶನಕ್ಕೊಳಪಡಿಸಿಕೊಳ್ಳಲಾಗಿದೆ. ಅವರ ಒಟ್ಟು ಸಂಖ್ಯೆ ೧೦೪ ಇರುತ್ತದೆ.

### ೨.೨ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಿತಿ :

'ಮಹಿಳಾಪರಾಧಿಗಳು ಒಂದು ಸಮಾಜಶಾಸ್ತ್ರ ಅಧ್ಯಯನ'' ಎಂಬ ಸಂಶೋಧನಾ ಶಿರೋನಾಮೆ ಸೂಚಿಸುವಂತೆ ಪ್ರಸ್ತುತ ಅಧ್ಯಯನವು ಮಹಿಳಾಪರಾಧಿಗಳಿಗೆ ಸೀಮಿತವಾಗಿದೆ. ಮಹಿಳಾಪರಾಧವಿಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿರುವುದರಿಂದ ಅದರ ಗಂಭೀರತೆ ಅರಿತುಕೊಳ್ಳಲು ಮಹಿಳಾಪರಾಧಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗೆ ಒತ್ತು ಕೊಡಲಾಗಿದೆ. ಮುಖ್ಯವಾಗಿ ಮಹಿಳೆಯರು ಅಪರಾಧವೆಸಗುವಂಥ ಸಂದರ್ಭ, ಸನ್ನಿವೇಶ ಇತ್ಯಾದಿಗಳ ಬಗ್ಗೆ ಗಮನಹರಿಸಲು ಒಟ್ಟಿನಲ್ಲಿ ಮಹಿಳಾಪರಾಧದ

ಎಲ್ಲಾ ಮಗ್ಗಲುಗಳ ಬಗ್ಗೆ ಸಮಷ್ಠಿ ದೃಷ್ಟಿಕೋನದಿಂದ (Holistic Approach) ನೋಡುವ ಉದ್ದೇಶವನ್ನಿಟ್ಟುಕೊಂಡು ಈ ಮಹಿಳಾಪರಾಧದ ಸಮಸ್ಯೆಯನ್ನು ಆರಿಸಿಕೊಳ್ಳಲಾಗಿದೆ.

ಇನ್ನೊಂದಂಶವೆಂದರೆ ಪುರುಷರಿಗಷ್ಟೇ ಸೀಮಿತವೆಂಬಂತೆ ಪುರುಷರನ್ನು ಕೇಂದ್ರೀಕರಿಸಿ ಅಪರಾಧ ಮತ್ತು ಅಪರಾಧಿ ಬಗ್ಗೆ ಅಭ್ಯಸಿಸುವ ಪರಂಪರೆ ಬೆಳೆದು ಬಂದಿದೆ. ಇತ್ತೀಚೆಗಷ್ಟೇ ಮಹಿಳಾಪರಾಧದ ಗಂಭೀರತೆ ಅರಿತ ಸಂಶೋಧಕರು, ಚಿಂತಕರು ಈ ದಿಕ್ಕಿನಲ್ಲಿ ನಡೆಸಲಾರಂಭಿಸಿದ ಅಧ್ಯಯನಗಳು ಸಹ ಬೆರಳೆಣಿಕೆಯಷ್ಟು. ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಮಹಿಳಾಪರಾಧದ ಸಮಸ್ಯೆಯ ಬಗ್ಗೆ ಸಂಶೋಧನೆಗಳು ನಡೆದಿಲ್ಲವೆಂಬ ಅಂಶ ಕಂಡುಬಂದಾಗ, ಮಹಿಳಾಪರಾಧಕ್ಕೆ ಸಂಬಂಧಿಸಿದ ವಿಷಯದ ಮೇಲೆ ಸಂಶೋಧನೆ ಮಾಡಿ ಇದ್ದ ಕೊರತೆಯನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಈ ಸಂಶೋಧನಾಧ್ಯಯನ ಮಾಡಲಾಗಿದೆ. ಆದರೆ ಇಲ್ಲಿ ಸ್ಪಷ್ಟಪಡಿಸಲೇಬೇಕಾದ ಸಂಗತಿಯೆಂದರೆ, ಮಹಿಳಾಪರಾಧಿಗಳ ಬಗೆಗಿನ ಆಳವಾದ ಅಧ್ಯಯನ ಕೈಗೊಳ್ಳಲು ಮಹಿಳಾಪರಾಧಿಗಳ ವ್ಯಕ್ತಿಗತ ಅವರ ಊರುಗಳಿಗೆ ಹೋಗಿ ಅಲ್ಲಿಯ ಕೌಟುಂಬಿಕ ಪರಿಸರ-ಪರಿಸ್ಥಿತಿಗಳ ಬಗ್ಗೆ ಅಭ್ಯಸಿಸಬೇಕಾಗುತ್ತದೆ. ಆದರೆ ಅದು ಸಾಧ್ಯವಾಗದ ಮಾತು. ಏಕೆಂದರೆ ಮಹಿಳಾಪರಾಧಿಗಳ ವ್ಯಕ್ತಿಗತ, ಅವರು ಇದ್ದ ಪ್ರತಿಯೊಂದು ಸ್ಥಳಗಳಿಗೆ ಹೋಗಿ ಅವರ ಕುಟುಂಬದ ಸ್ಥಿತಿ-ಗತಿಗಳ ಬಗ್ಗೆ ತಿಳಿದುಕೊಳ್ಳಲು ಬಹಳಷ್ಟು ಸಮಯ ಬೇಕಾಗುತ್ತದೆ. ಅದಲ್ಲದೆ ಹಣಕಾಸಿನ ಸಮಸ್ಯೆ ಉದ್ಭವವಾಗುತ್ತದೆ.

ಸಂಶೋಧನೆಗೆ ತನ್ನದೇ ಆದ ಇತಿ-ಮಿತಿ ಇರುತ್ತದೆ. ಅದನ್ನರಿತು ಬೆಂಗಳೂರು ಮತ್ತು ಬೆಳಗಾವಿಯ ಕೇಂದ್ರ ಕಾರಾಗೃಹಗಳಲ್ಲಿದ್ದ ಮಹಿಳಾಪರಾಧಿಗಳನ್ನು ಅಧ್ಯಯನದ ಪರಧಿಗೊಳಪಡಿಸಿಕೊಳ್ಳಲಾಗಿದೆ. ಕಾರಾಗೃಹದಲ್ಲಿದ್ದ ವಿಚಾರಣಾಧೀನ ಮಹಿಳೆಯರನ್ನು ಹೊರತುಪಡಿಸಿ ಕೇವಲ ಮಹಿಳಾ ಕೈದಿಗಳನ್ನಷ್ಟೇ ಅಧ್ಯಯನಕ್ಕೊಳಪಡಿಸಿಕೊಳ್ಳಲು ಕಾರಣವೆಂದರೆ ವಿಚಾರಣಾಧೀನ ಮಹಿಳೆಯರು ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುವವರಾಗಿರುತ್ತಾರೆ. ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆದಿರುವುದರಿಂದ ಅವರು ಅಪರಾಧಿಗಳೆಂದು ಅಧ್ಯಯನಕ್ಕೊಳಪಡಿಸಿಕೊಳ್ಳಲು ಬರುವುದಿಲ್ಲ. ಆದುದರಿಂದ ಈ ಅಧ್ಯಯನ ಕೇವಲ ಅಪರಾಧಿ ಮಹಿಳೆಯರನ್ನು ಕುರಿತದ್ದಾಗಿದೆ.

## ೨.೩ ಅಧ್ಯಯನದ ಉದ್ದೇಶ ಮತ್ತು ಗುರಿಗಳು (Aims and Objectives) :

ಈ ನನ್ನ ಪಿಎಚ್.ಡಿ. ಸಂಶೋಧನ ಕಾರ್ಯವನ್ನು ಈ ಕೆಳಗಿನ ಉದ್ದೇಶ ಮತ್ತು ಗುರಿಗಳನ್ನಿಟ್ಟುಕೊಂಡು ಕೈಗೊಳ್ಳಲಾಗಿದೆ.

- ಮಹಿಳಾಪರಾಧದ ಸ್ವರೂಪ ತಿಳಿಯುವ ಉದ್ದೇಶ ಮತ್ತು ಗುರಿಗಳನ್ನು ಹೊಂದಲಾಗಿದೆ.
- ಮಹಿಳೆಯರ ಅಪರಾಧಿಕ ನಡವಳಿಕೆಗಳತ್ತ ಗಮನ ಹರಿಸುವ ಉದ್ದೇಶದಿಂದ
- ಮಹಿಳಾಪರಾಧವಿಂದು ಗಂಭೀರ ಸಾಮಾಜಿಕ ಸಮಸ್ಯೆಯೆ? ಮಹಿಳಾಪರಾಧದ ಎಲ್ಲ ಮಗ್ಗಲುಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ
- ಮಹಿಳಾಪರಾಧಕ್ಕೆ ಕಾರಣಗಳೇನು? ಅವರ ವಯಕ್ತಿಕ ಬದುಕಿನತ್ತ ನೋಡುವುದು.
- ಭಾರತೀಯ ಧರ್ಮ ಮತ್ತು ಪರಂಪರೆಯನ್ನು ನೋಡಿದಾಗ ಸ್ತ್ರೀಯರ ಜೀವನಶೈಲಿ ವಿಶಿಷ್ಟವಾದುದು. ಮಹಿಳೆಯರಲ್ಲಿರುವ ನೈತಿಕತೆ ಮತ್ತು ಮಾನವೀಯ ಮೌಲ್ಯಗಳಿಂದ ಸಮಾಜ ನೆಮ್ಮದಿಯಾಗಿತ್ತು. ಆದರೆ ಇಂದು ಜಾಗತೀಕರಣ-ನಗರೀಕರಣದಿಂದ ಬದಲಾವಣೆಯ ರಭಸಕ್ಕೆ ಸಿಕ್ಕ ಸಮಾಜದ ಮೌಲ್ಯಗಳು ನಶಿಸುತ್ತಿರುವುದರಿಂದ ಮನುಷ್ಯನ ನೆಮ್ಮದಿಯ ಬದುಕಿಗೆ ಸಂಚಕಾರ ಬಂದೊದಗಿದೆ. ಒಂದು ಕಡೆ ಶ್ರೀಮಂತಿಕೆ ಹೆಚ್ಚುತ್ತಿದ್ದಂತೆ ಇನ್ನೊಂದು ಕಡೆ ಬಡತನ ಹೆಚ್ಚುತ್ತಿರುವುದರಿಂದ ಅಥವಾ ಬೆಳೆಯುತ್ತಿರುವುದರಿಂದ 'ಬಡತನ'ವೆಂಬುದು ಸಾಮಾಜಿಕ ಸಮಸ್ಯೆಯಾಗಿ ಕಾಡುತ್ತಲಿದೆ. ಬಡವರ ಬದುಕು ಭೀಕರವಾಗುತ್ತಿದೆ. ಅಸಹಾಯಕತೆಯಿಂದ, ನೋವಿನಿಂದ, ಹತಾಶೆಯಿಂದ ಬದುಕು ದೂಡುತ್ತಿದ್ದಾರೆ. ಇಂತಹ ಪರಿಸ್ಥಿತಿ-ಪರಿಸರ ಮಹಿಳೆಯರು ಅಪರಾಧಿಗಳಾಗಲು ಕಾರಣವಾಗುತ್ತದೆಯೆ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಉದ್ದೇಶ ಮತ್ತು ಗುರಿಯಿಂದ.
- ಸಾಮಾಜಿಕ ಮತ್ತು ಕೌಟುಂಬಿಕ ಪರಿಸರ ಮತ್ತು ಪರಿಸ್ಥಿತಿಗಳು ಎಷ್ಟರ ಮಟ್ಟಿಗೆ ಮಹಿಳಾಪರಾಧಕ್ಕೆ ಕಾರಣವಾಗುತ್ತವೆ. ಜೊತೆಗೆ ಸಾಮಾನ್ಯ ಮಹಿಳೆಯಾದವಳು ಅಪರಾಧವೆಸಗಬೇಕಾದರೆ ಅವಳನ್ನು ಅಪರಾಧಿಕ ಕೃತ್ಯವೆಸಗುವಂತೆ ಪ್ರೇರೇಪಿಸುವ ಅಥವಾ ಅವಳನ್ನು ಪ್ರಭಾವಿಸುವ ಇತರ ಸಾಮಾಜಿಕ ಅಂಶಗಳಾವವು ಎಂಬುದನ್ನು ಸಹ ಕಂಡುಕೊಳ್ಳಬೇಕಾಗಿದೆ.

* ಇತ್ತೀಚೆಗೆ 'ಪಾಶ್ಚಾತ್ತೀಕರಣ'ದ ಮಾತು ಎಲ್ಲೆಡೆ ಕೇಳಿಸುತ್ತಿದೆ. ಅದರಲ್ಲೂ ಮಹಿಳೆಯರ ವಿಷಯದಲ್ಲಂತೂ ಸಾಮಾನ್ಯ. ಇದರಿಂದ ವಿಭಿನ್ನ ವೇಷ-ಭೂಷಣ, ಅದಕ್ಕೆ ತಕ್ಕಂತೆ ಸ್ವಚ್ಛಂದ ಬದುಕು ಇದಕ್ಕೆ ವ್ಯವಸ್ಥೆ ಕಲ್ಪಿಸಿಕೊಡುತ್ತಿರುವ ಮೋಜಿನ ತಾಣಗಳು. ಅಲ್ಲಿ ನಡೆಯುವ ಧೂಮಪಾನ, ಮದ್ಯಸೇವನೆ, ಕುಣಿತ ಇತ್ಯಾದಿಗಳಿಂದ ಮಹಿಳೆಯರು ಸಹ ವಿಕೃತ ಮನಸ್ಸಿನವರಾಗುತ್ತಿದ್ದಾರೆ. ಇದರಿಂದ ಸ್ವೇಚ್ಛಾಚಾರಿ ಅಥವಾ ವ್ಯಭಿಚಾರ ಇಂಥವರಿಂದಲೇ ಹೆಚ್ಚು ಅಪರಾಧಗಳಾಗುತ್ತವೆಂಬುದನ್ನು ಪರೀಕ್ಷಿಸುವ ಉದ್ದೇಶ ಮತ್ತು ಅವಶ್ಯಕತೆಯಿಂದ.

* ಮುಖ್ಯವಾಗಿ ಮಹಿಳಾಪರಾಧವೊಂದು ಗಂಭೀರ ಸಮಸ್ಯೆಯಾಗಿ ಬೆಳೆಯಲು ಮಹಿಳೆಯರಲ್ಲಿದ್ದ ನೈತಿಕತೆ ಮತ್ತು ಮೌಲ್ಯಾಧಾರಿತ ಬದುಕು ನಶಿಸುತ್ತಿರುವದರಿಂದ ಇದು ಕೇವಲ ಅಪರಾಧವೆಸಗಿದ ಒಬ್ಬ ಪುರುಷನಂತೆ ಅಪರಾಧಿಯಾದ ಒಬ್ಬ ಮಹಿಳೆಯ ಪ್ರಶ್ನೆಯಾಗುವುದಿಲ್ಲ. ಒಬ್ಬೊಬ್ಬಳು ಒಂದೊಂದು ಕುಟುಂಬದ ಕಣ್ಣು, ಮಹಿಳೆಯಿಲ್ಲದ ಕುಟುಂಬಗಳಿಗೆ ಅರ್ಥವೇ ಇರುವುದಿಲ್ಲ. ಅಂದರೆ ವಿವಾಹಿತ ಗೃಹಿಣಿ ಅಪರಾಧವೆಸಗಿ ಕಾರಾಗೃಹ ಸೇರಿದರೆ ಅವರ ಅಪ್ರಾಪ್ತ ವಯಸ್ಸಿನ ಮಕ್ಕಳ ಆರೈಕೆ, ಶಿಕ್ಷಣ, ಬೆಳವಣಿಗೆ ಮತ್ತು ಭವಿಷ್ಯ ಇಂತಹ ಹಲವಾರು ಪ್ರಶ್ನೆಗಳೇಳುತ್ತವೆ. ಅಂತಹ ಕುಟುಂಬ ಸತ್ತಂತೆಯೇ ಆಗುತ್ತದೆ. ಈ ಎಲ್ಲಾ ಪರಿಣಾಮಗಳನ್ನು ನೋಡುವ ಅವಶ್ಯಕತೆಯಿಂದ ಮತ್ತು ಉದ್ದೇಶದಿಂದ ಈ ಸಂಶೋಧನಾ ವಿಷಯ ಆಯ್ದುಕೊಳ್ಳಲಾಗಿದೆ.

* ಈ ನಿಟ್ಟಿನಲ್ಲಿ ನೋಡಲಾಗಿ ಮಹಿಳಾಪರಾಧವೆಂದು ಪ್ರತ್ಯೇಕಿಸಿ ನಡೆಸುವ ಅಧ್ಯಯನಗಳ ಅವಶ್ಯಕತೆ ಬಹಳಷ್ಟಿದೆ. ಅದರ ಗಂಭೀರತೆ, ಸಮಾಜದ ಮೇಲಾಗುವ ದುಷ್ಪರಿಣಾಮಗಳನ್ನು ಕಂಡುಕೊಳ್ಳಬೇಕಾಗಿರುವುದರಿಂದ ಹಾಗೂ ಅದಕ್ಕೆ ಪರಿಹಾರೋಪಾಯ ಸೂಚಿಸುವ ಅವಶ್ಯಕತೆಯಿಂದ, ಇದರ ಅರ್ಥ ಸರಳವಾಗಿದೆ. ಅದು ಮನುಷ್ಯ ಸಮಾಜದ ಒಳಿತಿಗಾಗಿ, ವಿಕಾಸಕ್ಕಾಗಿ ಮಹಿಳೆಯರು ಮಾಡುವ ಅಪರಾಧಗಳನ್ನು ಪ್ರತ್ಯೇಕಿಸಿ ನೋಡುವ ಅವಶ್ಯಕತೆ ಇದೆ. ಇನ್ನೆರಡು ಮಾತುಗಳಲ್ಲಿ ಹೇಳಬೇಕೆಂದರೆ ಮಹಿಳಾಪರಾಧದ ಬಗ್ಗೆ ಜನಸಾಮಾನ್ಯರಲ್ಲಿ ತಪ್ಪು ತಿಳುವಳಿಕೆಗಳಿವೆ. ಪೂರ್ವಾಗ್ರಹಪೀಡಿತರಾಗಿದ್ದಾರೆ. ಅದಕ್ಕೆ ಜನಸಾಮಾನ್ಯರಲ್ಲಿರುವ ಅಂಧಶ್ರದ್ಧೆ, ದುರಾಲೋಚನೆ, ಅನಕ್ಷರತೆ ಮತ್ತು

ಸಂಶೋಧನಾಧ್ಯಯನಗಳ ಕೊರತೆಯು ಸಹ ಕಾರಣವಾಗಿದೆ. ಈ ಎಲ್ಲ ವಿಚಾರಗಳನ್ನಿಟ್ಟುಕೊಂಡು ಮಹಿಳಾಪರಾಧದ ಮೇಲೆ ಬೆಳಕು ಚೆಲ್ಲುವ ಉದ್ದೇಶ ಮತ್ತು ಅವಶ್ಯಕತೆಯಿಂದ ಈ ಸಂಶೋಧನಾಧ್ಯಯನವನ್ನು ಮಾಡಲಾಗಿದೆ.

**೨.೪ ಪ್ರಾಕ್‌ಕಲ್ಪನೆಗಳು :**

- ❖ ಮಹಿಳಾಪರಾಧಕ್ಕೆ ಬಡತನ ಒಂದು ಪ್ರಮುಖ ಕಾರಣವಾಗಿದೆ.
- ❖ ಮಹಿಳಾಪರಾಧಿಗಳಿಗೆ ಸಾಮಾಜಿಕ ಮತ್ತು ಕೌಟುಂಬಿಕ ಪರಿಸ್ಥಿತಿ ಮತ್ತು ಪರಿಸರಗಳು ಮೂಲ ಕಾರಣಗಳಾಗಿವೆ.
- ❖ ಮಹಿಳಾಪರಾಧಿಗಳಲ್ಲಿ ಮಾನವ ದೇಹಕ್ಕೆ ಸಂಬಂಧಿಸಿದ ಅಪರಾಧಗಳನ್ನೆಸಗಿದವರ ಪ್ರಮಾಣ ಹೆಚ್ಚು.
- ❖ ಅನಕ್ಷರತೆಯು ಮಹಿಳಾಪರಾಧಕ್ಕೆ ಪ್ರಮುಖ ಕಾರಣಗಳಲ್ಲೊಂದು.

ಮೇಲಿನ ಪ್ರಾಕ್‌ಕಲ್ಪನೆ ಅಥವಾ ಪೂರ್ವಸಿದ್ಧಾಂತಗಳನ್ನಾಧರಿಸಿ ಈ ನನ್ನ ಸಂಶೋಧನಾಧ್ಯಯನವನ್ನು ಮಾಡಲಾಗಿದೆ.

**೨.೫ ಸಂಶೋಧನಾ ವಿನ್ಯಾಸ :**

ಪ್ರಸ್ತುತ ನನ್ನ ಈ ಪಿಎಚ್.ಡಿ. ಸಂಶೋಧನಾ ಅಧ್ಯಯನಕ್ಕೆ ಸಂಬಂಧಪಟ್ಟಂತೆ, ಸಂಶೋಧನಾ ವಿನ್ಯಾಸವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯದಲ್ಲಿ ದೊರೆತಂಥಹ ಪ್ರಚಲಿತ ನಿಯತಕಾಲಿಕೆಗಳು, ವಿಶ್ವಕೋಶಗಳು, ಸಂಶೋಧನಾ ಲೇಖನಗಳು, 'ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಮಿನೋಲೋಜಿ ಅ್ಯಂಡ್ ಫೊರೆನ್ಸಿಕ್ ಸೈನ್ಸ್' ಇದರಿಂದ ನಿಯಮಿತವಾಗಿ ಪ್ರಕಟಗೊಳ್ಳುವ ನಿಯತಕಾಲಿಕೆಗಳನ್ನು ಮತ್ತು ವಿವಿಧ ಗ್ರಂಥಗಳನ್ನು ಹಾಗೂ ಸ್ನಾತಕೋತ್ತರ ಸಮಾಜಶಾಸ್ತ್ರ ಮತ್ತು ಅಪರಾಧಶಾಸ್ತ್ರ ವಿಭಾಗದಲ್ಲಿ ದೊರೆಯುವ ವಿವಿಧ ವಿಷಯಗಳನ್ನೊಳಗೊಂಡ ಸಂಶೋಧನಾ ಕೃತಿಗಳು / ಲೇಖನಗಳು ನನ್ನ ಈ ಸಂಶೋಧನಾ ವಿನ್ಯಾಸದಲ್ಲಿ ತೊಡಗಿಸಿಕೊಳ್ಳಲಾಗಿದೆ.

### ೨.೬ ಪೂರ್ವಭಾವಿ ಅಧ್ಯಯನ :

ಪೂರ್ವಬಾವಿ ಅಧ್ಯಯನ ತುಂಬಾ ಮಹತ್ವದ್ದು. ಇದರಿಂದ ಸಂಶೋಧನೆಯ ಆಳ-ಹರವುಗಳ ಬಗ್ಗೆ ನಿರ್ದಿಷ್ಟವಾದ ಚೌಕಟ್ಟನ್ನು ರೂಪಿಸಿಕೊಂಡು ವ್ಯವಸ್ಥಿತವಾಗಿ ಮುನ್ನುಗ್ಗಲು ಸಹಾಯಕವಾಗುತ್ತದೆ. ಸಂಶೋಧನಕಾರ್ಯ ಕೈಕೊಳ್ಳುವ ಪೂರ್ವದಲ್ಲಿ ಅಥವಾ ಕ್ಷೇತ್ರಾಧ್ಯಯನ ಪ್ರಾರಂಭಿಸುವ ಪೂರ್ವದಲ್ಲಿ ಸಂಶೋಧಕನಲ್ಲಿರುವ ಅನುಮಾನಗಳಿಗೆ ಮತ್ತು ದ್ವಂದ್ವಗಳಿಗೆ ಪರಿಹಾರ ಕಂಡುಕೊಂಡು ಸಂಶೋಧನೆಯಲ್ಲಿ ನಿರ್ದಿಷ್ಟ ಮಾರ್ಗ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಹಾಗೂ ಅರ್ಥಪೂರ್ಣವಾದ ದತ್ತಾಂಶಗಳ ಸಂಗ್ರಹಣೆಗೆ ಅನುಕೂಲವಾಗುತ್ತದೆ. ಅದಕ್ಕಾಗಿ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡ ಸಂಶೋಧಕನು ಸಂದರ್ಶನ ತಪಶೀಲುಗಳನ್ನು ಸಿದ್ಧಪಡಿಸಿ ಅಂತಿಮಗೊಳಿಸುವ ಪೂರ್ವದಲ್ಲಿ ಕೇಂದ್ರ ಕಾರಾಗೃಹಗಳೆರಡಕ್ಕೂ ಭೆಟ್ಟಿಕೊಟ್ಟು ವೀಕ್ಷಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡುದರ ಆಧಾರದ ಮೇಲೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಂಡು ಮುಂದಿನ ಸಂಶೋಧನ ಕಾರ್ಯಕ್ಕೆ ಮುನ್ನುಗ್ಗಿದ್ದನ್ನು ದಾಖಲಿಸಬೇಕಾಗುತ್ತದೆ. ಆದುದರಿಂದ ಇಂತಹ ಸಂಶೋಧನಾಧ್ಯಯನ ಕೈಕೊಳ್ಳುವಲ್ಲಿ ಪೂರ್ವಭಾವಿ ಅಧ್ಯಯನ ಪ್ರಮುಖ ಪಾತ್ರವಹಿಸುತ್ತದೆ.

### ೨.೭ ಅಧ್ಯಯನದ ಸ್ಥಳ ಮತ್ತು ಪರಿಚಯ :

ಕರ್ನಾಟಕದ ಆರು ಕೇಂದ್ರ ಕಾರಾಗೃಹಗಳಲ್ಲಿ ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಹಾಗೂ ಬೆಳಗಾವಿ ಹಿಂಡಲಗಾ ಕೇಂದ್ರ ಕಾರಾಗೃಹಗಳೂ ಸೇರಿವೆ. ಭದ್ರತಾ ದೃಷ್ಟಿಯಿಂದ ಇವೆರಡೂ ಪ್ರಸಿದ್ಧಿ ಪಡೆದುಕೊಂಡಿವೆ. ಪ್ರತಿಷ್ಠಿತ ಮತ್ತು ಕುಖ್ಯಾತ ಅಪರಾಧಿಗಳನ್ನಿಡಲು ಇವುಗಳೆರಡನ್ನು ಆಯ್ದುಕೊಳ್ಳುವುದೊಂದು ವಿಶೇಷ. ಆದುದರಿಂದ ಇವೆರಡು ಕೇಂದ್ರ ಕಾರಾಗೃಹಗಳನ್ನು ಅಧ್ಯಯನದ ಹಿತದೃಷ್ಟಿಯಿಂದ ಆಯ್ದುಕೊಳ್ಳಲಾಗಿದೆ.

**ಮೊದಲನೆಯದಾಗಿ** ವಿವರಿಸಬೇಕಾದುದು ರಾಜ್ಯದ ರಾಜಧಾನಿಯಾದ ಬೆಂಗಳೂರು ಬಗ್ಗೆ. ಇದು ಇಂದು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿರುವ ಬೃಹತ್ ನಗರ. ದೇಶದ ಪ್ರತಿಷ್ಠಿತ ನಂಬರ್ ಒನ್ ನಗರಗಳ ಸಾಲಿನಲ್ಲಿರುವ ಬೆಂಗಳೂರು ಕಂಪ್ಯೂಟರ್ ಕೊಳ್ಳ, ಸಿಲಿಕಾನ್ ಸಿಟಿ ಎಂದೂ ಕರೆಸಿಕೊಳ್ಳುತ್ತಿದೆ. ಜೊತೆ ಜೊತೆಗೆ

ಅಂತರ್‌ರಾಜ್ಯ ಮತ್ತು ಅಂತರರಾಷ್ಟ್ರೀಯ ಅಪರಾಧಿಗಳ ನೆಲೆಯಾಗುತ್ತಿರುವುದು ವಿಪರ್ಯಾಸ. ಸ್ಥಳೀಯವಾಗಿಯೂ ದಿನದಿಂದ ದಿನಕ್ಕೆ ಅಪರಾಧ ಹೆಚ್ಚುತ್ತಿದೆ. ಇದರಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಅಪರಾಧಿಗಳ ಜಗತ್ತು ಆದಂತಾಗಿದೆ. ಬೆಂಗಳೂರು ಕೇಂದ್ರಕಾರಾಗೃಹದ ಬಗ್ಗೆ ಹೇಳಬೇಕೆಂದರೆ ಆಗಿನ ಹಳೆ ಮೈಸೂರು ಪ್ರಾಂತ್ಯದ ಬೆಂಗಳೂರು ಕೇಂದ್ರ ಕಾರಾಗೃಹ ಕಟ್ಟಡ ೧೮೬೩ರಲ್ಲಿ ನಿರ್ಮಾಣವಾದುದು. ಆದರೆ ಈಗಿನ ವ್ಯವಸ್ಥೆಗೆ ಹೊಂದಿಕೆಯಾಗುವಂತೆ ಆಧುನಿಕರಣಗೊಳಿಸುವ ಉದ್ದೇಶದಿಂದ ರಾಜ್ಯ ಯೋಜನಾ ನೀತಿಯಡಿಯಲ್ಲಿ ೧೯೯೯-೨೦೦೦ನೇ ಇಸವಿಯಲ್ಲಿ ಕಾರಾಗೃಹ ಕಟ್ಟಡಗಳ ನಿರ್ಮಾಣ ಮತ್ತು ಕಾರಾಗೃಹ ನೌಕರರ ವಸತಿ ಗೃಹಗಳ ನಿರ್ಮಾಣದಡಿಯಲ್ಲಿ ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಕಟ್ಟಡ ನಿರ್ಮಾಣವಾಗಿರುತ್ತದೆ. ಹಳೆಯ ಕಟ್ಟಡದಿಂದ ಸ್ಥಳಾಂತರಗೊಂಡು ಹೊಸ ವಿನ್ಯಾಸದಲ್ಲಿ ಹೊಸ ಸೌಲಭ್ಯಗಳೊಂದಿಗೆ ಕಂಗೊಳಿಸುತ್ತಿರುವ ಕೇಂದ್ರ ಕಾರಾಗೃಹ ಕಟ್ಟಡ ಅಪರಾಧಿಗಳ ಪಾಲಿನ ಪ್ರಪಂಚವೇ ಆಗಿದೆ ಎಂದು ಮತ್ತೊಮ್ಮೆ ಉಲ್ಲೇಖಿಸಬೇಕಾಗುತ್ತದೆ. ಇದು ಕೆಂಪೇಗೌಡ ಕೇಂದ್ರ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ಸುಮಾರು ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳಿಗಿಂತ ದೊಡ್ಡದು, ವಿಶಿಷ್ಟವಾದುದು, ಸುಸಜ್ಜಿತವಾದುದು ಮತ್ತು ಹೆಸರುವಾಸಿಯಾದದ್ದೂ ಆಗಿದೆ. ಇಲ್ಲಿ ಮಹಿಳಾ ಅಪರಾಧಿಗಳನ್ನು ಹಾಗೂ ವಿಚಾರಣಾಧೀನ ಮಹಿಳಾ ಬಂಧಿಗಳನ್ನಿಡಲು ಪ್ರತ್ಯೇಕ ವ್ಯವಸ್ಥೆ ಇರುತ್ತದೆ. ಮಹಿಳಾಪರಾಧಿಗಳಿಗಾಗಿ ಶಿಕ್ಷಣ ಮತ್ತು ಗೃಹೋಪಯೋಗಿ ಕೈಗಾರಿಕೆಗಳ ಬಗ್ಗೆ ಶಿಕ್ಷಣ ನೀಡಲಾಗುತ್ತದೆ. ಕಾಲಕಾಲಕ್ಕೆ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಮನೋರಂಜನೆಗಳ ಏರ್ಪಾಡು ನಡೆಯುತ್ತದೆ. ಆರೋಗ್ಯದ ಬಗ್ಗೆ ಗಮನ ಹರಿಸಲು ಆಸ್ಪತ್ರೆಯೂ ಇಲ್ಲಿರುತ್ತದೆ.

ಮಹಿಳಾ ಕೈದಿಗಳ ಮನಪರಿವರ್ತನೆಯಲ್ಲಿ ಕೆಲ ಕ್ರಿಶ್ಚಿಯನ್ ಸಂಸ್ಥೆಗಳು ಹಾಗೂ ರವಿಶಂಕರ ಗುರುಜೀಯವರ ಅನುಯಾಯಿಗಳು ಹಾಕಿಕೊಳ್ಳುವ ಕಾರ್ಯಕ್ರಮಗಳು ತುಂಬಾ ಪ್ರಭಾವ ಬೀರುತ್ತಿವೆ. ಮಹಿಳಾಪರಾಧಿಗಳು ಹೇಳುವಂತೆ ತಾವು ಮುಂದಿನ ಬದುಕಿನ ಬಗ್ಗೆ ಆಸೆ ಇಟ್ಟುಕೊಂಡು ಬದುಕುತ್ತಿರುವುದೇ ಇಂತಹ ಕಾರ್ಯಕ್ರಮಗಳ ಪ್ರಭಾವದಿಂದ ಎಂದು.

ಶಿಕ್ಷೆ ಪೂರೈಸಿ ಹೊರಜಗತ್ತಿಗೆ ಕಾಲಿಟ್ಟಾಗ ಇಂತಹ ಸಂಸ್ಥೆಗಳು ಆಶ್ರಯ ಒದಗಿಸಿಕೊಡುತ್ತಿವೆ. ಕಾರಾಗೃಹದಲ್ಲಿರುವ ಮಹಿಳೆಯರಿಗೆ ವಕೀಲರ ಸಹಾಯ ಕಲ್ಪಿಸಿಕೊಡುವುದು, ಪ್ರಾರ್ಥನೆ ಹೇಳಿಕೊಡುವುದು,

ಧ್ಯಾನ, ನೈತಿಕತೆ ಪಾಠ, ಕೌನ್ಸಿಲಿಂಗ್, ಮಹಿಳಾಪರಾಧಿಗಳ ಮನೆಯ ಸಂಬಂಧಿಗಳೊಂದಿಗೆ ಫೋನ್ ಮೂಲಕ ಸಂಪರ್ಕ ಕಲ್ಪಿಸಿಕೊಡುವುದು ಮುಂತಾದ ಮಹತ್ವದ ಕೆಲಸಗಳಲ್ಲಿ ಈ ಸರ್ಕಾರೇತರ ಸಂಸ್ಥೆಗಳು ತೊಡಗಿಸಿಕೊಂಡಿರುವುದು ಶ್ಲಾಘನೀಯ.

**ಎರಡನೆಯದಾಗಿ** ರಾಜ್ಯದ ಎರಡನೆಯ ರಾಜಧಾನಿ ಎಂದೇ ಕರೆಯಲಾಗುತ್ತಿರುವ ಬೆಳಗಾವಿ ಬಗ್ಗೆ. ಇದು ಕರ್ನಾಟಕ - ಮಹಾರಾಷ್ಟ್ರ ಗಡಿಭಾಗದಲ್ಲಿದೆ. ನಗರ ಪ್ರದೇಶವಂತೂ ತೀವ್ರಗತಿಯಲ್ಲಿ ಬೆಳೆಯುತ್ತಿರುವುದು. ಆಗಾಗ ಭಾಷಾ ವಿವಾದಕ್ಕೆ ಗುರಿಯಾಗುತ್ತಿರುವ ಇದು ಸದಾ ವಿವಾದಗ್ರಸ್ಥ ಪ್ರದೇಶ. ನಗರದ ಹೊರವಲಯದಲ್ಲಿ ೧೯೩೨ ರಲ್ಲಿ ಪ್ರಾರಂಬವಾದ ಕಾರಾಗೃಹ 'ಹಿಂಡಲಗಾ ಜೈಲು' ಎಂದೇ ಖ್ಯಾತಿ ಪಡೆದುಕೊಂಡು ಬಂದಿದೆ. ಇದು ಕೇಂದ್ರ ಬಸ್ ನಿಲ್ದಾಣದಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಇದರ ಭೂಮಿಯ ಒಟ್ಟು ವಿಸ್ತೀರ್ಣ ೯೯ ಎಕರೆ. ಆದರೆ ಕಾರಾಗೃಹದೊಳಗಿನ ಆವರಣ ಕೇವಲ ೨೪ ಎಕರೆ ಇರುತ್ತದೆ. ಇನ್ನುಳಿದ ಜಾಗವೆಲ್ಲ ಕಾರಾಗೃಹದ ಅಧೀನಕ್ಕೊಳಪಟ್ಟ ಹೊರ ಆವರಣವಾಗಿದೆ. ಇಲ್ಲಿ ಸಿಬ್ಬಂದಿಯ ವಸತಿಗೃಹಗಳೂ ಇರುತ್ತವೆ.

ಇಲ್ಲಿಯೂ ಸಹ ಮಹಿಳಾಪರಾಧಿಗಳನ್ನು ಹಾಗೂ ವಿಚಾರಣಾಧೀನ ಮಹಿಳಾ ಬಂಧಿಗಳನ್ನಿಡಲು ಪ್ರತ್ಯೇಕ ವ್ಯವಸ್ಥೆ ಮಾಡಿರುತ್ತಾರೆ. ಆದರೆ ಮಹಿಳಾಪರಾಧಿಗಳಿಗಿರುವ ಸೌಲಭ್ಯಗಳು ಅಷ್ಟಕ್ಕಷ್ಟೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸೌಲಭ್ಯಗಳು ಇಲ್ಲಿಲ್ಲ. ಅಲ್ಲಿಯ ಸ್ವಚ್ಛತೆ, ಸುಂದರ ಪರಿಸರ, ಮುಕ್ತ ವಾತಾವರಣ ಅದರಲ್ಲೂ ಮುಖ್ಯವಾಗಿ ಮನಪರಿವರ್ತನೆ ಕಾರ್ಯಕ್ರಮಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಸರ್ಕಾರೇತರ ಸಂಸ್ಥೆಗಳೂ ಸಹ ಇಲ್ಲಿಲ್ಲ. ಕೆಲವೊಂದು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದರೂ ಅದು ಸಮರ್ಪಣಾಭಾವದಿಂದ ಮಾಡದೇ ಪ್ರಚಾರಕ್ಕಾಗಿ ಮಾಡುತ್ತಿರುವುದು ವಿಪರ್ಯಾಸ.

**೨.೮ ಅಧ್ಯಾಯಗಳ ರಚನೆ :**

ಅಧ್ಯಯನವನ್ನು ವ್ಯವಸ್ಥಿತವಾಗಿ ಈ ಕೆಳಗಿನ ಐದು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಅವು -

ಅಧ್ಯಾಯ - ಒಂದು

**ಪ್ರಸ್ತಾವನೆ**

೧.೧ ಪರಿಕಲ್ಪನೆಗಳು

೧.೨ ಅಪರಾಧಿಗಳ ವರ್ಗೀಕರಣ

೧.೩ ಸಾಹಿತ್ಯಕ ಪರಾಮರ್ಶೆ

ಅಧ್ಯಾಯ - ಎರಡು

**ಸಂಶೋಧನ ಅಧ್ಯಯನದ ವಿಧಾನ ಮತ್ತು ಸಮಸ್ಯೆಗಳು**

೨.೧ ದತ್ತಾಂಶಗಳ ಸಂಗ್ರಹಣೆ

೨.೨ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಿತಿ

೨.೩ ಅಧ್ಯಯನದ ಉದ್ದೇಶ ಮತ್ತು ಗುರಿಗಳು

೨.೪ ಪ್ರಾಕ್‌ಕಲ್ಪನೆಗಳು

೨.೫ ಸಂಶೋಧನಾ ವಿನ್ಯಾಸ

೨.೬ ಪೂರ್ವಭಾವಿ ಅಧ್ಯಯನ

೨.೭ ಅಧ್ಯಯನದ ಸ್ಥಳ ಮತ್ತು ಪರಿಚಯ

೨.೮ ಅಧ್ಯಾಯಗಳ ರಚನೆ

ಅಧ್ಯಾಯ - ಮೂರು

**ಮಹಿಳಾಪರಾಧಿಗಳು : ಸಾಮಾಜಿಕ-ಆರ್ಥಿಕ ಹಿನ್ನೆಲೆ**

ಅಧ್ಯಾಯ - ನಾಲ್ಕು

**ಮಹಿಳಾಪರಾಧಕ್ಕೆ ಕಾರಣಗಳು : ಕೆಲ ಆಯ್ದ ಪ್ರಮುಖ ಪ್ರಕರಣಗಳ ಅಧ್ಯಯನ**

೪.೧ ಮಹಿಳಾಪರಾಧದ ಸ್ವಭಾವ

೪.೨ ಮಹಿಳಾಪರಾಧದ ಪ್ರಕಾರಗಳು

## ಅಧ್ಯಾಯ - ಐದು

### ಉಪಸಂಹಾರ

ಮಹಾಪ್ರಬಂಧದ ಕೊನೆಯ ಅಧ್ಯಾಯವಾದ ಇಲ್ಲಿ ಮಹಾಪ್ರಬಂಧದ ಎಲ್ಲ ವಿಷಯಗಳ ಸ್ಥೂಲ ಚಿತ್ರಣವಿದೆ. ಮುಖ್ಯ ವಿಚಾರಗಳನ್ನು ಹಿಡಿದಿಡುವುದರ ಜೊತೆಗೆ ಸಮಾರೋಪದ ಕೊನೆಯಲ್ಲಿ ಉಪಯುಕ್ತ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ ಹಾಗೂ ಸಂಶೋಧನೆಗೆ ಸಂಬಂಧಿಸಿದಂತೆ ಉಪಯುಕ್ತ ಗ್ರಂಥಗಳು, ಸಂಶೋಧನಾ ಲೇಖನಗಳು, ನಿಯತಕಾಲಿಕೆಗಳು ಮತ್ತು ದಿನಪತ್ರಿಕೆಗಳನ್ನೊಳಗೊಂಡ ಗ್ರಂಥಋಣ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

❖❖❖